ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
ಸಹಯೋಗ
ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು ಮೈಸೂರು

ಐಚ್ಛಿಕ ಕನ್ನಡ ವಿದ್ಯಾರ್ಥಿನಿಯರಿಗಾಗಿ

# ವಚನ–ವ್ಯಾಖ್ಯಾನ ಕಮ್ಮಟ






























ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು, ಮೈಸೂರಿನಲ್ಲಿ ದಿನಾಂಕ 28–07–2018 ರಂದು ಶನಿವಾರ ಐಚ್ಛಿಕ ಕನ್ನಡ ವಿದ್ಯಾರ್ಥಿನಿಯರಿಗಾಗಿ ವಚನ–ವ್ಯಾಖ್ಯಾನ ಕಮ್ಮಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮ ನಟರಾಜ ಪ್ರತಿಷ್ಠಾನದ ಅಧ್ಯಕ್ಷರಾದ ಪೂಜ್ಯ ಶ್ರೀ ಚಿದಾನಂದ ಸ್ವಾಮಿಗಳವರ ಸಮ್ಮುಖದಲ್ಲಿ ನಡೆಯಿತು. ಇದೊಂದು ವಿಶಿಷ್ಠ ಕಾರ್ಯಕ್ರಮ. 10 ಜನ ವಿದ್ಯಾರ್ಥಿಗಳ ಎರಡು ಗುಂಪು 20 ವಚನಗಳನ್ನು ಓದಿ ವ್ಯಾಖ್ಯಾನ ಮಾಡುವುದು. ಇದರ ಪರಿಣಾಮವಾಗಿ ಅಷ್ಟೂ ಜನ ವಿದ್ಯಾರ್ಥಿಗಳು ವಚನ ಸಾಹಿತ್ಯಕ್ಕೆ ನೇರವಾಗಿ ಪ್ರವೇಶ ಮಾಡಿದಂತ್ತಾಗುತ್ತದೆ. ಹಾಗೆಯೇ ಇವರ

ವ್ಯಾಖ್ಯಾನವನ್ನು ಕೇಳಿದ ಇತರ ವಿದ್ಯಾರ್ಥಿಗಳು ಇದರಿಂದ ಪ್ರೇರಣೆಗೊಳಗಾಗುತ್ತಾರೆ. ಎರಡು ಗುಂಪುಗಳ ವ್ಯಾಖ್ಯಾನವನ್ನು ಕುರಿತು ಇಬ್ಬರು ವಿದ್ವಾಂಸರು ವ್ಯಾಖ್ಯಾನದ ಬಳಿಕ ವಿಮರ್ಶೆ ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಶಾರದ ಅವರು ವಹಿಸಿದ್ದು, ವಿದ್ವಾಂಸರಾಗಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಎನ್.ಕೆ. ಲೋಲಾಕ್ಷಿಯವರು ಮತ್ತು ಇದೇ ಕಾಲೇಜಿನ ಉಪ ಪ್ರಾಂಶುಪಾಲರು ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀ ಜಿ. ಪ್ರಸಾದ್‌ಮೂರ್ತಿಯವರು ಆಗಮಿಸಿದ್ದರು. ಆಶಯನುಡಿಗಳನ್ನು ಶ್ರೀ ಬಸವೇಶ್ವರ ಕೇಂದ್ರದ ಸಂದರ್ಶಕ ಪ್ರಾಧ್ಯಾಪಕರಾದ ಪ್ರೊ. ಚಂದ್ರಶೇಖರಯ್ಯನವರು ನೆರವೇರಿಸಿದರು. ಈ ಕಾರ್ಯಕ್ರಮ ಬಹುಜನರ ಮೆಚ್ಚುಗೆ ಗಳಿಸಿತು.

Vachana Vyakhyana Kammata, a workshap on reading and commenting on the vachanas of shivasharanas.The programme as was conceived unique. Totally 20 students in two groups had to comment and interpret 20 vachans of shivasharanas. After the commentary passed by the students two scholars gave their opinion on the students' performance. The programme was held in the presence of Sri Chidananda Swamiji, President of Sri Nataraja Pratisthana, Mysore. Prof. N.K. Lolakshi from Kuvempu Institute of Kannada Studies, Manasagangothri, Mysore and Prof. G. Prasada Murthy, HOD, and Vice Principal, Sri Nataraja College, Mysore, were the scholars who commented on the performances of the students. Dr. M. Sharada Principal of the collage presided the function.